ಶ್ರೀ ಕೆ ಯಂಕಟಪ್ಪ.—ಆ ಪ್ರಶ್ನೆ ಉದ್ಭವವಾಗುವುದಿಲ್ಲ. ಆದರೂ ಸಹ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ೩೦ ನೇ ತಾರೀಖು ಶಾಸಕರ ಸಭೆಯನ್ನು ಕರೆದಿದ್ದೇವೆ.

ಶ್ರೀ ವಿ. ಮಸಿಯಪ್ಪ.—ತಾವು ಸ್ಥಾಪನೆ ಮಾಡಿರತಕ್ಕ ಹಾರ್ಟಿಕಲ್ಚರ್ ಫಾರಂಗಳಲ್ಲಿ ರೈತರಿಗೆ ಆವಶ್ಯಕವಾಗಿ ಬೇಕಾಗಿರತಕ್ಕಂಥ ಗಿಡಗಳನ್ನು ಒದಗಿಸತಕ್ಕಂಥಾದ್ದು ಸಾಕಷ್ಟು ಪ್ರಮಾಣದಲ್ಲಿ ನಡೆಯುತ್ತಾ ಇಲ್ಲ ಎನ್ನುವುದು ಅನುಭವಕ್ಕೆ ಬಂದಿದೆ. ಆದುದರಿಂದ ತೆಂಗು, ಹಣ್ಣಿನ ಗಿಡಗಳು, ಪಪಾಯ್ ವಗೈರೆ ಸಸಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಯಂಕಟಪ್ಪ. – ಬೇಡಿಕೆ ಸಾಕಷ್ಟು ಇದೆ. ಆದರೆಲ್ಲಿ ನಾವು ಸಾಧ್ಯವಾದಷ್ಟು ಪ್ರಯತ್ನಗಳನ್ನು ಮಾಡುತ್ತಾ ಇದ್ದೇವೆ. ಖಾಸಗಿ ನರ್ಸರಿ ಫಾರಂಗಳನ್ನು ಮಾಡುತ್ತಾ ಇದ್ದಾರೆ. ಆರ್ಥಿಕ ದೃಷ್ಟಿ ಕೋನಗಳನ್ನು ಇಟ್ಟುಕೊಂಡು ರೈತರಿಗೆ ಅನುಕೂಲಕರವಾಗಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ವಿ. ಎ. ಮಿತ್ರಿಕಟ್ಟಿ —ಮಾನ್ಯ ಮಂತ್ರಿಗಳು ಓದಿದ ೧೨ ತಾಲ್ಲೂಕುಗಳಲ್ಲಿ ನನ್ನ ತಾಲ್ಲೂಕು ಇಲ್ಲಿ. ಆಲ್ಲಿ ಚಿಕ್ಕದೊಂದು ಜಾಗದಲ್ಲಿ ೨೦ ಗುಂಚೆ ನರ್ಸರಿ ಇದೆ. ಅದಕ್ಕೂ ಫಾರಂ ಅನ್ನುತಾರೋ ಹೇಗೋ ಸಂಶಯ ಬರುತ್ತದೆ ನರ್ಸರಿ ಬೇರೆ ಹಾರ್ಟಿಕಲ್ಚರ್ ಫಾರಂ ಬೇರೆ ಎಂಬುದನ್ನು ಸನ್ಮಾನ್ಯ ಮಂತ್ರಿಗಳಿಗೆ ತಮ್ಮ ಮೂಲಕ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಫಾರಂ ದೊಡ್ಡದಾಗಿರಬೇಕು, ಜನ ಬಂದು ನೋಡಲಿಕ್ಕೆ ಅನುಕೂಲತೆ ಇರಬೇಕು, ಜನತೆಗೆ ಹೆಚ್ಚಿನ ಮಾಹಿತಿ ಒದಗಿಸತಕ್ಕಥಾದ್ದು. ನನ್ನ ದೃಷ್ಟಿಯಲ್ಲಿ ವಿಚಾರ ಮಾಡಿದರೆ ಇದು ೧೨ ಅಲ್ಲ ಇನ್ನೂ ಹೆಚ್ಚು ಇರಬಹುದು ಎಂದು ಸಂಶಯ ಬರುತ್ತದೆ. ಇದಕ್ಕ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ?

ಶ್ರೀ ಕೆ. ಯಂಕಟಪ್ಪ.—ಈಗ ಮಾನ್ಯ ಸದಸ್ಯರು ಗಮನಕ್ಕೆ ತಂದುದನ್ನು ಇಟ್ಟು ನಾನು ವಿಚಾರ ಮಾಡಿಸುತ್ತೇನೆ.

Building for Girls High School in Chittapur.

862 SRI S. F. BHAIRY (Shahabad) and SRI B. V. KAKKILAYA (Vittal)—Will the Minister of State for Primary and Secondary Education be pleased to state:—

(a) whether the Government is aware that the Chittapur Government Girls High School is being run on shift basis in the Higher Primary School Building;

(b) the student strength of the Higher Primary School and the Girls High School respectively;

(c) whether the Government intend to consider sanctioning construction of a building for the Girls High School in the current year (1980-81)?

SMT. NAGAMMA C. KESHAVAMURTHY—Minister of State for Primary and Secondary Education.

(a) Yes.

(b) The strength of Model Primary School is : boy 501 + girls 95 = 596. The strength of Government Girls High School is 88.

(c) The name of Government Girls High School, Chittapur is included in the list of Schools for which buildings are to be put up during the current year.

ಶ್ರೀ ಎಸ್. ಎಫ್. ಭೈರಿ.—ನನ್ನ (೩) ಪ್ರಶ್ನೆಗೆ ಉತ್ತರದಲ್ಲಿ ಈ ವರ್ಷ ಕಟ್ಟಲಿರುವ ಕಟ್ಟಡಗಳ ಪಟ್ಟಿಗೆ ಚಿತ್ತಾಪುರ ಬಾಲಕೀಯರ ಪ್ರೌಢ ಶಾಲೆಯ ಕಟ್ಟಡದ ಕೆಲಸವನ್ನು ಸೇರಿಸಿಕೊಳ್ಳಲಾಗುವುದೆಂದು ಹೇಳಿದ್ದೀರಿ, ಅದಕ್ಕೆ ಎಷ್ಟು ಎಸ್ಟಿಮೇಟ್ ಮಾಡಲಾಗಿದೆ ? ಯಾವಾಗ ಕೆಲಸವನ್ನು ಶುರು ಮಾಡುತ್ತೀರಿ ?

† ಶ್ರೀಮತಿ ನಾಗಮ್ಮ ಕೇಶವ ಮೂರ್ತಿ.—ಈಗ ಯಾವುದೇ ಕಟ್ಟಡವನ್ನು ನಾವು ಕಟ್ಟಬೇಕಾದರೂ ಮೊದಲನೆಯದಾಗಿ ಅಲ್ಲಿಯವರು ಜಾಗವನ್ನು ಕೊಡಬೇಕಾಗಿರುತ್ತದೆ. ಬರೀ ಒಂದು ರೆಜಲ್ಯೂಷನ್ ಮಾಡಿ ಅದರ ಕಾಪಿಯನ್ನು ಕಳುಹಿಸಿಕೊಟ್ಟರೆ ಅಷ್ಟರಿಂದಲೇ ನಾವು ಕಟ್ಟಡದ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಮೊದಲು ಅವರು ಆ ಜಾಗವನ್ನು ಸರ್ಕಾರದ ಹೆಸರಿಗೆ ರಿಜಿಸ್ಟ್ರೇಷನ್ ಮಾಡಿಕೊಡಬೇಕು, ಆನಂತರ ನಾವು ೧೯೮೦-೮೧ರ ಪಟ್ಟಿಯಲ್ಲಿ ಸೇರಿಸಿಕೊಳ್ಳುತ್ತೇವೆ. ಈಗ ಆ ಜಾಗ ನಮ್ಮ ವಶದಲ್ಲಿ ಇಲ್ಲದೇ ಇರುವುದರಿಂದ ನಾವು ಅದನ್ನು ತೆಗೆದುಕೊಳ್ಳುವುದಕ್ಕೆ ಆಗಿಲ್ಲ.

ಶ್ರೀ ಎಸ್. ಎಫ್. ಭೈರಿ.—ಅಧ್ಯಕ್ಷರೇ, ಈಗಾಗಲೇ ಅಲ್ಲಿ ಏನು ಪ್ರಾಥಮಿಕ ಶಾಲೆ ಜಾಗವಿದೆ ಅದೇ ಜಾಗದಲ್ಲಿ ಕಟ್ಟುವ ಸಲುವಾಗಿ ರೆಜಲ್ಯೂಷನ್ ಪಾಸ್ ಮಾಡಲಾಗಿದೆ.

ಶ್ರೀಮತಿ ನಾಗಮ್ಮ ಕೇಶವ ಮೂರ್ತಿ.—ಆ ಜಾಗವನ್ನು ತಾವು ಹೇಳಿದ ಹಾಗೆ ಫಾರ್ಮಾಲಿಟೀಸ್ ಪ್ರಕಾರ ಮಾಡಿಸಿಕೊಟ್ಟಿಲ್ಲ, ಮಾಡಿಸಿಕೊಟ್ಟರೆ ಎಸ್ಟಿಮೇಟ್ಸ್, ಪ್ಲಾನ್ ತಯಾರು ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಸ್. ಎಫ್. ಭೈರಿ.—ಅಧ್ಯಕ್ಷರೇ, ನಾನು ಹೇಳುತ್ತಿರುವುದು ಬೇರೆ ಜಾಗದಲ್ಲಿ ಬಾಲಕೀಯರ ಪ್ರೌಢ ಶಾಲೆಯನ್ನು ಕಟ್ಟುವ ಬದಲು ಈಗಿರುವ ಶಾಲೆಯ ಕೆಲವು ಭಾಗ ಬಿದ್ದು ಹೋಗಿರುವುದರಿಂದ, ಅದನ್ನು ಕೆಡವಿ ಅದೇ ಜಾಗದಲ್ಲಿ ಹೊಸದಾಗಿ ಕಟ್ಟಬಹುದಲ್ಲವೇ ಎಂದು ? ಅದಕ್ಕೆ ಯಾವಾಗ ಕೆಲಸವನ್ನು ಶುರು ಮಾಡುತ್ತೀರಾ ?

ಶ್ರೀಮತಿ ನಾಗಮ್ಮ ಕೇಶವ ಮೂರ್ತಿ.—ಆ ಜಾಗವನ್ನು ಪ್ರಾಥಮಿಕ ಶಾಲೆಗೆ ಕೊಡಲಾಗಿದೆ, ಈಗ ಕಟ್ಟಬೇಕಾಗಿರುವುದು ಬಾಲಕೀಯರ ಪ್ರಾಥಮಶಾಲೆ.

ಅಧ್ಯಕ್ಷರು.—ಆ ಶಾಲೆ ಸರ್ಕಾರದ ವಶದಲ್ಲಿಲ್ಲವೇ ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಈಗ ಅವರು ಹೇಳುವಂಥಾದ್ದು ಅಲ್ಲಿರುವ ಪ್ರಾಥಮಿಕ ಶಾಲಾ ಕಟ್ಟಡ ಸರಿಯಾಗಿಲ್ಲ ಆ ಜಾಗದಲ್ಲಿ ಕಟ್ಟಿಸಿ ಎಂದು ಹೇಳುತ್ತಿದ್ದಾರೆ. ಆದರೆ ಈಗಾಗಲೇ ಬೇರೆಯವರು ಒಂದೂವರೆ ಎಕರೆ ಜಮೀನನ್ನು ಬಾಲಕಿಯರ ಪ್ರೌಢಶಾಲೆಯನ್ನು ಕಟ್ಟಿಸುವ ಸಲುವಾಗಿ ಕೊಡಲು ಮುಂದೆ ಬಂದಿದ್ದಾರೆ. ಆ ಜಾಗವನ್ನು ಅವರು ಕೊಟ್ಟಕೂಡಲೇ ಅಲ್ಲಿ ತೆಗೆದುಕೊಳ್ಳುತ್ತೇವೆ. ಈಗಿರತಕ್ಕ ಪ್ರಾಥಮಿಕ ಶಾಲೆಯನ್ನು ಪ್ರಾಥಮಿಕ ಶಾಲೆಗಾಗಿಯೇ ಇಟ್ಟುಕೊಳ್ಳುತ್ತೇವೆ.

ಶ್ರೀ ಎಸ್. ಎಫ್. ಭೈರಿ.—ಆ ಒಂದು ಜಾಗದಲ್ಲಿ ೧೫ ಕೊಠಡಿಗಳನ್ನು ಕಟ್ಟುವುದಕ್ಕೆ ಜಾಗವಿದೆ ಮತ್ತು ಮಕ್ಕಳಿಗೆ ಆಡುವುದಕ್ಕೂ ಸ್ವಲ್ಪ ಜಾಗ ಮಿಕ್ಕುತ್ತದೆ. ಇಷ್ಟು ಜಾಗ ಇಲ್ಲದೆ, ಅಂಥಾದ್ದು ಅದನ್ನು ಬಿಟ್ಟು ಬೇರೆ ಯಾರೋ ಒಂದೂವರೆ ಎಕರೆ ಜಮೀನನ್ನು ಕೊಡುವುದಕ್ಕೆ ಮುಂದೆ ಬಂದಿದ್ದಾರೆಂದು ಹೇಳುತ್ತಿದ್ದೀರಿ, ಅವರು ಯಾರೋ ನಮಗೆ ಗೊತ್ತಿಲ್ಲ, ಅವರ ಹೆಸರಾದರೂ ಹೇಳುತ್ತೀರಾ ?

ಶ್ರೀಮತಿ ನಾಗಮ್ಮ ಕೇಶವ ಮೂರ್ತಿ.—ಈಗ ಒಂದೂವರೆ ಎಕರೆ ಜಮೀನನ್ನು ಯಾರೋ ಕೊಡುವುದಕ್ಕೆ ಮುಂದೆ ಬಂದಿದ್ದಾರೆ, ಅವರು ನಮ್ಮ ಇಲಾಖೆಗೆ ರಿಜಿಸ್ಟರ್ ಮಾಡಿಸಿದ ಮೇಲೆ ನಾವು ಮುಂದೆ ಪ್ಲಾನ್ ಮತ್ತು ಎಸ್ಟಿಮೇಟ್‌ನ್ನು ತಯಾರಿಸಿ ಅಲ್ಲಿ ಶಾಲೆಯನ್ನು ಕಟ್ಟಿಸಿಕೊಡುತ್ತೇವೆ.

ಅಧ್ಯಕ್ಷರು.—ಯಾರೋ ಮುಂದೆ ಬಂದು ಜಮೀನನ್ನು ಕೊಡುತ್ತಾರೆಂದು ಹೇಳುತ್ತಿದ್ದೀರಿ, ನಾಳೆ ಅವರು ಕೊಡುತ್ತಾರೋ ಬಿಡುತ್ತಾರೋ, ಅದರ ಬದಲು ಈಗಿರುವ ಸ್ಥಳದಲ್ಲಿಯೇ ಏತಕ್ಕೆ ಬಾಲಕಿಯರ ಪ್ರೌಢಶಾಲೆಯನ್ನು ಕಟ್ಟಿಸಬಾರದು, ಇದರ ಬಗ್ಗೆ ಸರ್ಕಾರ ಏತಕ್ಕೆ ಯೋಚನೆ ಮಾಡಬಾರದು ?

ಶ್ರೀಮತಿ ನಾಗಮ್ಮ ಕೇಶವ ಮೂರ್ತಿ.—ಈಗಿರುವ ಜಾಗದಲ್ಲಿ ಪ್ರಾಥಮಿಕ ಶಾಲೆ ನಡೆಯುತ್ತಿದೆ, ಅಲ್ಲಿ ಮಕ್ಕಳಿಗೆ ಆಟ ಪಾಟಕ್ಕೆ ಸಾಕಷ್ಟು ಜಾಗವಿಲ್ಲವೆಂದು ವರದಿ ಬಂದಿದೆ, ಆದುದರಿಂದ ಬೇರೆಯವರು

ಒಂದೂವರೆ ಎಕರೆ ಜಮೀನನ್ನು ಕೊಡುವುದಕ್ಕೆ ಮುಂದೆ ಬಂದಿದ್ದಾರೆ, ಮತ್ತು ಅದರ ಬಗ್ಗೆ ಒಂದು ರೆಜಲ್ಯೂಷನ್ ಪಾಸ್ ಆಗಿ ಸರ್ಕಾರಕ್ಕೆ ಬಂದಿದೆ.

ಶ್ರೀ ಎ. ಅಜೀಜ್ ಸೇಠ್.--ಒಂದೂವರೆ ಎಕರೆ ಜಮೀನನ್ನು ಕೊಡುವವರ ಹೆಸರನ್ನಾದರೂ ಹೇಳುತ್ತೀರಾ ದಯಮಾಡಿ ?

ಅಧ್ಯಕ್ಷರು.--ಅವರು ನಾಳೆ ಕೊಡುವುದಿಲ್ಲವೆಂದು ಹೇಳಬಹುದು, ಅಲ್ಲಿಯವರೆಗೆ ಶಾಲೆ ಕಟ್ಟುವುದ ಬೇಡವೇ ?

ಶ್ರೀಮತಿ ನಾಗಮ್ಮ ಕೇಶವ ಮೂರ್ತಿ.--ಇದರ ಬಗ್ಗೆ ಈಗಾಗಲೇ ನಮ್ಮ ಡಿಪಾರ್ಟ್‌ಮೆಂಟ್ ನೊಂದಿಗೆ ಪತ್ರ ವ್ಯವಹಾರ ಮಾಡಿದ್ದಾರೆ. ಮತ್ತೆ ಅಲ್ಲಿರುವ ಪಂಚಾಯಿತಿಯವರು ರೆಜಲ್ಯೂಷನ್ ಪಾಸ್ ಮಾಡಿ ಕಳುಹಿಸಿ ಕೊಟ್ಟಿದ್ದಾರೆ, ಆದುದರಿಂದ ನಾನು ಹೇಳುತ್ತಿದ್ದೇನೆ ಅವರು ಆ ಜಾಗವನು ಕೂಡಲೇ ನಮ್ಮ ಸರ್ಕಾರದ ಹೆಸರಿಗೆ ರಿಜಿಸ್ಟರ್ ಮಾಡಿಸಿಕೊಟ್ಟರೆ ನಾವು ಪ್ಲಾನ್ ಎಸ್ಟಿಮೇಟ್ ತಯಾರು ಮಾಡಿಸಿ ಮುಂದಿನ ವರ್ಷದಲ್ಲಿ ಆ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎ. ಅಜೀಜ್ ಸೇಠ್.--ಯಾರು ಒಂದೂವರೆ ಎಕರೆ ಜಮೀನನ್ನು ಕೊಡುವವರು ಎನ್ನುವ ಹೆಸರನ್ನು ಹೇಳಿದರೆ, ಅಲ್ಲಿರುವ ಎಂ.ಎಲ್.ಎ ಗಳು ಬೇಗನೇ ಆದು ರಿಜಿಸ್ಟರ್ ಮಾಡಿಸಿಕೊಡುತ್ತಾರೆ.

ಶ್ರೀಮತಿ ನಾಗಮ್ಮ ಕೇಶವ ಮೂರ್ತಿ.--ಆ ಹೆಸರು ನನ್ನ ಹತ್ತಿರವಿಲ್ಲ. ಸದಸ್ಯರಿಗೆ ಬೇಕಾದರೆ ನಾನು ಆ ಮೇಲೆ ತಿಳಿಸುತ್ತೇನೆ.

ಶ್ರೀ ಎಸ್. ಎಫ್. ಭೈರಿ.--ಮಾನ್ಯ ಸಚಿವೆಯರು ಪಂಚಾಯಿತಿ ಎಂದು ಹೇಳಿದರು ಅಲ್ಲಿ ಪಂಚಾಯಿತಿ ಇಲ್ಲ, ಮುನಿಸಿಪಾಲಿಟಿ ಇರುವುದು. ಮತ್ತೆ ಅಲ್ಲಿ ಸ್ಕೂಲ್ ಗ್ರೌಂಡ್ ಮಕ್ಕಳಿಗೆ ಆಟವಾಡಲು ಸಾಕಷ್ಟು ಜಾಗವಿದ್ದು ೧೫ ಕೊಠಡಿಗಳನ್ನು ಕಟ್ಟಿಸಲು ಸಾಕಷ್ಟು ಜಾಗವಿದೆ ಆದುದರಿಂದ ಅಲ್ಲಿಯೇ ಕಟ್ಟಿಸುತ್ತೀರಾ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎ. ಅಜೀಜ್ ಸೇಠ್.--ಪಂಚಾಯಿತಿಯವರು ರೆಜಲ್ಯೂಷನ್ ಮಾಡಿದ್ದಾರೆ, ಮುನಿಸಿಪಾಲಿಟಿಯವರು ರೆಜಲ್ಯೂಷನ್ ಮಾಡಿದ್ದಾರೆಂದು ಹೇಳುತ್ತಿದ್ದಾರೆ ಇದರಲ್ಲಿ ಯಾವುದು ನಿಜ ? ಇಲ್ಲಿ ಮಾನ್ಯ ಮಂತ್ರಿಗಳವರು ಸರಿಯಾದ ವಿವರವನ್ನು ತಿಳಿದುಕೊಂಡಿಲ್ಲ ಉತ್ತರ ಸ್ವಲ್ಪ ಏತಕ್ಕೋ ಕನ್ ಫ್ಯೂಜನ್ ಆಗುತ್ತಿದೆ.

ಶ್ರೀಮತಿ ನಾಗಮ್ಮ ಕೇಶವ ಮೂರ್ತಿ.--ಅಧ್ಯಕ್ಷರೇ ನಾನು ಉತ್ತರವನ್ನು ಸರಿ ಮಾಡಿಕೊಳ್ಳುತ್ತೇನೆ ಅದು ಪಂಚಾಯಿತಿಯಲ್ಲ, ಮುನಿಸಿಪಾಲಿಟಿ.

ಅಧ್ಯಕ್ಷರು.--ಮುಂದಿನ ಪ್ರಶ್ನೆ ಶ್ರೀ ಎಂ. ಪಂಪಾಪತಿ – ಬಂದಿಲ್ಲ, ಶ್ರೀ ಬಾಬು ರಾವ್ ದೇಶಪಾಂಡೆ – ಬಂದಿಲ್ಲ. ತಡೆಹಿಡಿಯಲಾದ ಪ್ರಶ್ನೆ ನಂ.೪೯೩ ಶ್ರೀ ಎಸ್. ಆರ್. ಬೊಮ್ಮಾಯ್ ರವರಿಂದ.

***Malaprabha Water Supply Scheme for Hubli-Dharwar City.**

493 Sri K. B. Shivaiah (Nanjanagud).— Will the Minister for Housing and Urban Development be pleased to state.—

(a) the progress of Malaprabha water supply scheme for Hubli-Dharwad City from its commencement uptill date,

(b) the number of pipes obtained by the Karnataka Urban Water supply and Sewerage Board and the length of the same,

(c) what is the length of pipes laid down uptill now,

(d) what is the escalation of expenditure for this project during the last 2 years,

(e) the time required for completion of the project ?